# ಬ್ರೆಜಿಲ್ ಅಧ್ಯಕ್ಷರೊಂದಿಗೆ ಪ್ರಧಾನ ಮಂತ್ರಿಯ ಸಭೆ

ಸೆಪ್ಟೆಂಬರ್ 10, 2023

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು 10 ಸೆಪ್ಟೆಂಬರ್ 2023 ರಂದು ನವದೆಹಲಿಯಲ್ಲಿ G20 ಶೃಂಗಸಭೆಯ ಸಂದರ್ಭದಲ್ಲಿ ಬ್ರೆಜಿಲ್ ಅಧ್ಯಕ್ಷರಾದ ಹೆಚ್  ಈ  ಶ್ರೀ ಲೂಯಿಜ್ ಇನಾಸಿಯೊ ಲುಲಾ ಡಾ ಸಿಲ್ವಾ ಅವರನ್ನು ಭೇಟಿಯಾದರು.

ಭಾರತದ G20 ಪ್ರೆಸಿಡೆನ್ಸಿಯ ಯಶಸ್ಸಿಗೆ ಅಧ್ಯಕ್ಷ ಲೂಲಾ ಪ್ರಧಾನ ಮಂತ್ರಿಯನ್ನು ಅಭಿನಂದಿಸಿದರು. ಮುಂದಿನ ವರ್ಷ ಬ್ರೆಜಿಲ್‌ನ G20 ಪ್ರೆಸಿಡೆನ್ಸಿಗೆ ಪ್ರಧಾನಿ ತಮ್ಮ ಶುಭಾಶಯಗಳನ್ನು ತಿಳಿಸಿದರು ಮತ್ತು ಅವರಿಗೆ ಭಾರತದ ಸಂಪೂರ್ಣ ಬೆಂಬಲದ ಭರವಸೆ ನೀಡಿದರು.

ಜೈವಿಕ ಇಂಧನಗಳು, ಔಷಧಗಳು, ಕೃಷಿ ಆಧಾರಿತ ಕೈಗಾರಿಕೆಗಳು, ಬಾಹ್ಯಾಕಾಶ ಮತ್ತು ವಾಯುಯಾನದಲ್ಲಿ ಸಹಕಾರ ಸೇರಿದಂತೆ ಭಾರತ - ಬ್ರೆಜಿಲ್ ಕಾರ್ಯತಂತ್ರದ ಪಾಲುದಾರಿಕೆಯನ್ನು ಬಲಪಡಿಸುವ ಮಾರ್ಗಗಳ ಕುರಿತು ಚರ್ಚೆಗಳು ನಡೆದವು.

ಸಭೆಯ ಸಮಾರೋಪದಲ್ಲಿ ಜಂಟಿ ಹೇಳಿಕೆ ನೀಡಲಾಯಿತು.

**ನವ ದೆಹಲಿ**
**ಸೆಪ್ಟೆಂಬರ್ 10, 2023**